# ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ ನಿಯಮಿತ, ಶಿವಮೊಗ್ಗ

**'ಮಾಮ್‌ಕೋಸ್' ಸಂಕ್ಷಿಪ್ತ ಟಿಪ್ಪಣಿ:**

"ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ ನಿಯಮಿತ", ಶಿವಮೊಗ್ಗ ಸಂಕ್ಷಿಪ್ತದಲ್ಲಿ **"ಮಾಮ್‌ಕೋಸ್"** ಎಂದೇ ಪ್ರಸಿದ್ಧವಾದ ಸ್ವತಂತ್ರಪೂರ್ವ ಸಹಕಾರಿ ಸಂಸ್ಥೆಯಾಗಿದೆ. ಅಂದಿನ ಶಿವಮೊಗ್ಗ ಜಿಲ್ಲಾಧಿಕಾರಿಗಳಾಗಿದ್ದ ಮಾನ್ಯ ಶ್ರೀ ಎಂ.ಶೇಷಾದ್ರಿಯವರ ಅಧ್ಯಕ್ಷತೆಯಲ್ಲಿ ಅಡಿಕೆ ಬೆಳೆಗಾರರ ಹಿತವನ್ನು ಕಾಯುವ ಉದ್ದೇಶದಿಂದ ಈ ಸಂಘವನ್ನು ಸ್ಥಾಪಿಸುವಾಗ (ದಿನಾಂಕ:08/11/1939 ರಂದು) ಕೇವಲ 659 ಜನ ಸದಸ್ಯರಿದ್ದು, 5121 ಮೂಟೆ ಮಾತ್ರ ಅಡಿಕೆ ಆವಕವಾಗಿತ್ತು. ರೂ.16,031 ಷೇರು ಬಂಡವಾಳದೊಂದಿಗೆ ಆರಂಭಗೊಂಡ ಸಂಘವು ಸ್ಥಾಪನೆಯ ವರ್ಷವೇ ರೂ.3,867 ನಿವ್ವಳ ಲಾಭ ಗಳಿಸಿ ಶೇ.6.25 ರಷ್ಟು ಡಿವಿಡೆಂಡ್ ನೀಡುವಲ್ಲಿ ಸಫಲವಾಯಿತು. ನಂತರ **"ಮಾಮ್‌ಕೋಸ್"** ಸಂಸ್ಥೆಯು ಯಶಸ್ಸಿನ ಹಾದಿಯಲ್ಲಿ ಮುನ್ನಡೆದಿದ್ದು, ಪ್ರಸ್ತುತ ಸುಮಾರು 30000 ಕ್ಕೂ ಹೆಚ್ಚಿನ ಸದಸ್ಯರೊಂದಿಗೆ ಸದೃಢ ಆರ್ಥಿಕ ತಳಹದಿಯನ್ನು ಹೊಂದಿರುತ್ತದೆ. ಪ್ರಾರಂಭದಿಂದ ಇಲ್ಲಿಯವರೆಗೆ ಲಾಭದಲ್ಲೇ ಕಾರ್ಯ ನಿರ್ವಹಿಸುತ್ತಾ, ಪ್ರತಿ ವರ್ಷ ಡಿವಿಡೆಂಡ್‌ನ್ನು ನೀಡುತ್ತಿರುವ ಹೆಗ್ಗಳಿಕೆಯನ್ನು ಸಂಸ್ಥೆಯು ಹೊಂದಿರುತ್ತದೆ.

2022-23ನೇ ಸಾಲಿನಲ್ಲಿ ಸಂಸ್ಥೆಯು ರೂ.441.57 ಲಕ್ಷ ನಿವ್ವಳ ಲಾಭ ಗಳಿಸಿದ್ದು, ಈ ಸಾಲಿನಲ್ಲಿ ಸಂಸ್ಥೆಯ ಒಟ್ಟು ವ್ಯವಹಾರವು (ಟರ್ನ್ ಓವರ್) ರೂ.1,27,771.68 ಲಕ್ಷಗಳಾಗಿವೆ.

**ದಿನಾಂಕ: 27-02-2023ರಂದು ದೇಶದ ಸನ್ಮಾನ್ಯ ಪ್ರಧಾನ ಮಂತ್ರಿಗಳಿಂದ ಕೇಂದ್ರಕಛೇರಿಯ ಆಡಳಿತ ಭವನವು ಉದ್ಘಾಟನೆಗೊಂಡಿರುತ್ತದೆ.**

### ಮುಖ್ಯ ಉದ್ದೇಶಗಳು :

ಸಂಘದ ಮುಖ್ಯ ಉದ್ದೇಶಗಳೆಂದರೆ, ಸದಸ್ಯರು, ಕೃಷಿಕರು ಬೆಳೆದ ಅಡಿಕೆ ಮತ್ತು ಇತರೆ ಉಪ ಬೆಳೆಗಳ ಮಾರಾಟಕ್ಕಾಗಿ ವ್ಯವಸ್ಥಿತವಾದ ಮಾರುಕಟ್ಟೆ ಸೌಲಭ್ಯ ಒದಗಿಸುವುದು, ಅಡಿಕೆ ಮತ್ತು ಕಾಳುಮೆಣಸು ಖರೀದಿ ಮಾಡುವುದು, ಸದಸ್ಯರು ತಂದ ಉತ್ಪನ್ನಗಳಿಗೆ ಸುರಕ್ಷಿತ ಸಂಗ್ರಹಣೆ ಸೌಲಭ್ಯ ನೀಡುವುದು ಮತ್ತು ಅವರ ಅಪೇಕ್ಷೆಯಂತೆ ಒಪ್ಪಿದ ಬೆಲೆಗೆ ಮಾರಾಟ ಮಾಡುವುದು, ಕಟಾವು ಸಾಲ ನೀಡಿಕೆ, ತಂದ ಉತ್ಪನ್ನಗಳ ಮೇಲೆ ಮುಂಗಡ ಹಣ ಪಾವತಿಸುವುದು, ಸಂಸ್ಕರಣಾ ಚಟುವಟಿಕೆಗಳನ್ನು ಕೈಗೊಳ್ಳುವುದು, ಸಂಘದಿಂದ ಮೈಲುತುತ್ತ, ರಾಳ, ಸುಣ್ಣ ಹಾಗೂ ಸಾವಯವ ಗೊಬ್ಬರ ಇತ್ಯಾದಿಗಳನ್ನು ಮಾರಾಟ ಮಾಡುವುದು ಮುಂತಾದವುಗಳು.

### ಆಡಳಿತ ವ್ಯಾಪ್ತಿ :

ಸಂಘವು ಶಿವಮೊಗ್ಗ, ಚಿಕ್ಕಮಗಳೂರು ಕಂದಾಯ ಜಿಲ್ಲೆಗಳ ಮತ್ತು ದಾವಣಗೆರೆ ಜಿಲ್ಲೆಯ ಚನ್ನಗಿರಿ, ಹೊನ್ನಾಳಿ ಹಾಗೂ ನ್ಯಾಮತಿ ಕಂದಾಯ ತಾಲ್ಲೂಕುಗಳು ಸೇರಿ ಒಟ್ಟು 17 ತಾಲ್ಲೂಕುಗಳ ಆಡಳಿತ ವ್ಯಾಪ್ತಿಯನ್ನು ಹೊಂದಿರುತ್ತದೆ.

### ಆಡಳಿತ ಮಂಡಳಿ :

ಸಂಘದ ಆಡಳಿತವನ್ನು ನಿರ್ದೇಶಕರ ಮಂಡಳಿಯು ನಿರ್ವಹಿಸುತ್ತಿದೆ. ಆಡಳಿತ ಮಂಡಳಿಯು 21 ಜನ ನಿರ್ದೇಶಕರನ್ನು ಹೊಂದಿರುತ್ತದೆ. ಶಿವಮೊಗ್ಗ ಜಿಲ್ಲಾಧಿಕಾರಿಗಳು ಸಂಘದ ಪದನಿಮಿತ್ತ ಅಧ್ಯಕ್ಷರಾಗಿರುತ್ತಾರೆ.

**ಶಾಖೆಗಳು :** ಸಂಘದ ಕೇಂದ್ರಕಛೇರಿಯು ಶಿವಮೊಗ್ಗದಲ್ಲಿದ್ದು, 12 ಶಾಖೆಗಳು ಕ್ರಮವಾಗಿ– (1) ಶಿವಮೊಗ್ಗ (2) ಭದ್ರಾವತಿ (3) ತೀರ್ಥಹಳ್ಳಿ (4) ಸಾಗರ (5) ಹೊಸನಗರ (6) ತರೀಕೆರೆ (7) ಬೀರೂರು (8) ಕೊಪ್ಪ (9) ಶೃಂಗೇರಿ (10) ಚನ್ನಗಿರಿ (11) ಶಿಕಾರಿಪುರ ಹಾಗೂ (12) ಸೊರಬದಲ್ಲಿ ಇರುತ್ತವೆ.

ಇವುಗಳಲ್ಲದೆ, ಸಂಘವು ಅಡಿಕೆ ಖರೀದಿ ವ್ಯವಹಾರವನ್ನೂ ಮಾಡುತ್ತಿರುವುದರಿಂದ ಶಿವಮೊಗ್ಗದ ಕೋಟೆ ರಸ್ತೆಯಲ್ಲಿರುವ ಸಂಘದ ಕಟ್ಟಡದಲ್ಲಿ ಅಡಿಕೆ ನೇರ ಖರೀದಿ ಕೇಂದ್ರವನ್ನು ತೆರೆದಿರುತ್ತದೆ. ಸಂಘದಿಂದ ಅಡಿಕೆಯನ್ನು ಖರೀದಿ ಮಾಡುವುದರೊಂದಿಗೆ ಕಾರ್ಯವ್ಯಾಪ್ತಿಯ ವಿವಿಧೆಡೆಗಳಲ್ಲಿ ರೈತರಿಂದ ನೇರವಾಗಿಯೇ ಅಡಿಕೆ ಖರೀದಿ ಮಾಡಲಾಗುತ್ತಿದೆ. ಇದಕ್ಕಾಗಿ ಸಾಗರ, ಹೊಸನಗರ, ಆನವಟ್ಟಿ, ಕಳಸ ಮತ್ತು ಬಿ.ಹೆಚ್. ಕೈಮರದಲ್ಲಿ ಸುಸಜ್ಜಿತವಾದ **'ಅಡಿಕೆ ನೇರ ಖರೀದಿ ಕೇಂದ್ರ'** ವನ್ನು ತೆರೆಯಲಾಗಿದೆ.

ಸಂಘವು ರೂಪಿಸಿ ಅನುಷ್ಠಾನಗೊಳಿಸುತ್ತಿರುವ ಎಲ್ಲಾ ಯೋಜನೆಗಳು ಹಾಗೂ ಕಾರ್ಯಕ್ರಮಗಳನ್ನು ತನ್ನ ಕಾರ್ಯ ವ್ಯಾಪ್ತಿಯಲ್ಲಿ ಎಲ್ಲಾ ಭಾಗದ ಸದಸ್ಯರಿಗೂ ತಲುಪುವುದನ್ನು ಖಾತರಿಪಡಿಸಿಕೊಳ್ಳಲು 18 ಏಜೆನ್ಸಿಗಳನ್ನು ನೇಮಕ ಮಾಡಿಕೊಂಡಿದ್ದು, ಇವುಗಳಲ್ಲಿ ಖಾಸಗಿ ವ್ಯಕ್ತಿಗಳು ಹಾಗೂ ಸಹಕಾರ ಸಂಘಗಳು ಇರುತ್ತವೆ.

### ಸದಸ್ಯರಿಗೆ ನೀಡುತ್ತಿರುವ ಸೌಲಭ್ಯಗಳು :

**ವಿವಿಧ ಸಾಲ ಸೌಲಭ್ಯಗಳು: (ನಿಯಮಗಳಿಗೊಳಪಟ್ಟು)**

| | |
|---|---|
| * ಅಡಿಕೆ ಆಧಾರ ಸಾಲ | ರೈತರ ಮಾಲಿನ ಮೇಲೆ ಶೇ.60 ರಷ್ಟು ಮುಂಗಡ ಪಾವತಿ (ಬಡ್ಡಿ ದರ:11.50) |
| * ಕಟಾವು ಸಾಲ | ಪ್ರತಿ ಗುಂಟೆಗೆ ರೂ.2000 ರಂತೆ ಅಡಿಕೆ ವಹಿವಾಟು ಆಧರಿಸಿ, ಗರಿಷ್ಠ ರೂ.2.00 ಲಕ್ಷ. ಈ ಸಾಲದ ಸೌಲಭ್ಯವನ್ನು ಮಾಮ್‌ಕೋಸ್ ಕ್ರೆಡಿಟ್ ಕಾರ್ಡ್ ಮೂಲಕ ಪಡೆಯಬಹುದು. (ಬಡ್ಡಿ ದರ ಶೇ. 11.50) |
| * ಕೃಷಿ ಬಳಕೆ ಸಾಲ | ಪ್ರತಿ ಗುಂಟೆಗೆ ರೂ.3,750.00 ರಂತೆ ಗರಿಷ್ಠ ರೂ.10.00 ಲಕ್ಷ ದವರೆಗೆ |
| * ಕೊಳೆ ಔಷಧಿ ಸಾಲ | ಪ್ರತಿ ಗುಂಟೆಗೆ ರೂ.300-00 ರಂತೆ ಅಡಿಕೆ ವಹಿವಾಟು ಆಧರಿಸಿ, ಗರಿಷ್ಠ ರೂ.50,000-00. ಒಂದುವೇಳೆ ಕೊಳೆ ಔಷಧಿ ಸಾಲವನ್ನು ಮಾತ್ರ ಪಡೆಯಲು ಇಚ್ಛಿಸಿದಲ್ಲಿ ಅಂತಹವರಿಗೆ ಪ್ರತಿ ಗುಂಟೆಗೆ ರೂ.500-00 ರಂತೆ ಗರಿಷ್ಠ ರೂ.80,000-00 (ಬಡ್ಡಿದರ ಶೇ.11.50) |
| * ನಿಗದಿತ ಠೇವಣಿ ಆಧಾರ ಸಾಲ | ಠೇವಣಿ ಹಣದ ಮೇಲೆ ಗರಿಷ್ಠ ಶೇ.80.00 ರಷ್ಟು |

### ವಿವಿಧ ಠೇವಣಿ ಯೋಜನೆಗಳು :

* ಉಳಿತಾಯ ಖಾತೆ : ಶೇ.4.00
* ನಿಗದಿತ ಅವಧಿ ಠೇವಣಿ 12 ತಿಂಗಳುಗಳಿಗೆ : ಶೇ.6.50
* ನಿಗದಿತ ಅವಧಿ ಠೇವಣಿ 12 ತಿಂಗಳುಗಳಿಗೆ (ಹಿರಿಯ ನಾಗರಿಕ ಸದಸ್ಯರಿಗೆ) : ಶೇ.6.75

### ಸದಸ್ಯರ ಕ್ಷೇಮಾಭಿವೃದ್ಧಿ ನಿಧಿಯಿಂದ ನೀಡುತ್ತಿರುವ ಸೌಲಭ್ಯಗಳು :

* ಅಡಿಕೆ ಮಾರಾಟದ ಹಣದ ಮೇಲೆ ಶೇ.0.13 ರಷ್ಟು ಬೋನಸ್ ನೀಡಿಕೆ.
* ಅಸ್ತ್ರ ಒಲೆ ನಿರ್ಮಾಣಕ್ಕೆ ರೂ.1,000.00 ಮತ್ತು ಡ್ರೈಯರ್ ನಿರ್ಮಾಣಕ್ಕೆ ರೂ.7,000.00 ಸಹಾಯ ಧನ ನೀಡಿಕೆ.
* ಸಂಘದ ಮೂಲಕ ನೀಡಿದ ಗಟರ್ ಸ್ಪ್ರೇಯರ್ ಯಂತ್ರಕ್ಕೆ ರೂ.1,000.00 ಸಹಾಯ ಧನ ನೀಡಿಕೆ.

### ಅಡಿಕೆ ಸಂಶೋಧನಾ ನಿಧಿಯಿಂದ ನೀಡುತ್ತಿರುವ ಸೌಲಭ್ಯಗಳು :

* ಅಡಿಕೆ ಬೆಳೆ ಸಂರಕ್ಷಣೆಯ ಸಂಶೋಧನೆಗೆ ಹಾಗೂ ಅಡಿಕೆ ಸಂಸ್ಕರಣಾ ಯಂತ್ರೋಪಕರಣಗಳ ಅನ್ವೇಷಣೆ/ಅಭಿವೃದ್ಧಿಗೆ ಆರ್ಥಿಕ ನೆರವು.
* ಸದಸ್ಯರ ಅಡಿಕೆ ತೋಟಗಳಿಗೆ ತಗಲುವ ರೋಗಗಳ ನಿಯಂತ್ರಣಕ್ಕೆ ಕೃಷಿ ವಿಶ್ವವಿದ್ಯಾನಿಲಯಗಳ ವಿಜ್ಞಾನಿಗಳಿಂದ ತಾಂತ್ರಿಕ ಸಲಹೆ ನೀಡುವ ವ್ಯವಸ್ಥೆ.

### ಗೋದಾಮು ಸೌಲಭ್ಯಗಳು:

* ಸದಸ್ಯರ ಅಡಿಕೆಯನ್ನು ಉಚಿತವಾಗಿ ಒಂದು ವರ್ಷದ ಅವಧಿಗೆ ಸಂಗ್ರಹಿಸಿಡುವ ಸೌಲಭ್ಯ.
* ಸದಸ್ಯರು ಸ್ಪರ್ಧಾತ್ಮಕ ದರಗಳನ್ನು ಪಡೆಯಲು ಅನುವಾಗಲು ದಾಸ್ತಾನನ್ನು ಯಾವುದೇ ಶಾಖೆಯಿಂದ ಅವರು ಅಪೇಕ್ಷಿಸುವ ಬೇರೆ ಶಾಖೆಗಳಿಗೆ ವರ್ಗಾಯಿಸಿ ಕೊಡುವ ಸೌಲಭ್ಯ.

### ವಿಮಾ ಸೌಲಭ್ಯಗಳು :

**ಗುಂಪು ವಿಮಾ ಯೋಜನೆ :**

'ಮಾಮ್‌ಕೋಸ್' ಸಂಸ್ಥೆಯು ತನ್ನ ಸದಸ್ಯರಿಗಾಗಿ **'ಗುಂಪು ವಿಮಾ ಅಭಿರಕ್ಷೆ ಯೋಜನೆ'** ಅನ್ನು ಜಾರಿಗೆ ತಂದಿದ್ದು, ಇದರಲ್ಲಿ ಸದಸ್ಯರು ಸಂಘದ ಶಾಖೆಗಳ ಮೂಲಕ ವಂತಿಕೆ ಮೊಬಲಗನ್ನು ಪಾವತಿಸಿದರೆ ಆ ಸದಸ್ಯರಿಗೆ ಮತ್ತು ಅವರ ಹೆಸರಿಸದ ಅನಿಯಮಿತ ಅವಲಂಬಿತ ಕೂಲಿ ಕಾರ್ಮಿಕರುಗಳಿಗೆ ಹಾಗೂ ಕುಟುಂಬದ ಸದಸ್ಯರಿಗೆ ವಿಮೆ ಮಾಡಲಾಗುವುದು.

### ವೈದ್ಯಕೀಯ ಸೌಲಭ್ಯಗಳು:

ಸಂಘವು ತನ್ನ ಸದಸ್ಯರ ಆರೋಗ್ಯದ ದೃಷ್ಟಿಯಿಂದ ಹಾಗೂ ಅನೇಕ ಗಂಭೀರ ಕಾಯಿಲೆಗಳಿಂದ ಬರುವ ದುಬಾರಿ ವೈದ್ಯಕೀಯ ವೆಚ್ಚವನ್ನು ಭರಿಸುವುದು ಕಷ್ಟವಾಗಿರುವುದನ್ನು ಮನಗಂಡು ಸದಸ್ಯ ಮತ್ತು ಅವರ ಪತಿ/ಪತ್ನಿ ಮಾತ್ರವಲ್ಲದೆ ಸದಸ್ಯರ ಅವಲಂಬಿತ ಸಹೋದರ ಮತ್ತು ಅವಿವಾಹಿತ ಸಹೋದರಿ/ಮಗ/ಸೊಸೆ/ ಮೊಮ್ಮಕ್ಕಳು/ಅವಿವಾಹಿತ ಮಗಳಿಗೆ ಅನ್ವಯವಾಗುವಂತೆ ICICI Lombard General Insurance Co. Ltd. ಇವರೊಂದಿಗೆ ಮಾಡಿಕೊಂಡ ಒಪ್ಪಂದದಂತೆ **'ಆರೋಗ್ಯ ವಿಮಾ ಯೋಜನೆ'** ಯನ್ನು ಜಾರಿಗೆ ತಂದಿರುತ್ತದೆ. ಗರಿಷ್ಠ ಪರಿಹಾರ ಮೊತ್ತ ರೂ.5.00 ಲಕ್ಷವಿದ್ದು, ವಿಮಾ ಕಂತು ಮೊಬಲಗು ವಿವಿಧ ವಯೋಮಾನದವರಿಗೆ ಬೇರೆ ಬೇರೆ ಸ್ಲ್ಯಾಬ್‌ಗಳಲ್ಲಿ ಇರುತ್ತದೆ. ಸದಸ್ಯರು ಮತ್ತು ಅವರ ಕುಟುಂಬದವರು ಇದರ ಸೌಲಭ್ಯವನ್ನು ಪಡೆಯಬಹುದಾಗಿದೆ.

**"ಶಂಕರ ಕಣ್ಣಿನ ಆಸ್ಪತ್ರೆ"** ಶಿವಮೊಗ್ಗ ಇವರೊಂದಿಗೆ ಸಂಸ್ಥೆಯು ಮಾಡಿಕೊಂಡಿರುವ ಟೈ-ಅಪ್ ವ್ಯವಸ್ಥೆ ಅನ್ವಯ ಪ್ರತಿ ಸದಸ್ಯರು ಹಾಗೂ ಅವರ ನಿಗದಿತ ಕುಟುಂಬ ಸದಸ್ಯರು ಉಚಿತ "Out-Patient Medical Treatment" ಸೌಲಭ್ಯವನ್ನು ಪಡೆಯಬಹುದಾಗಿದೆ.

### ಪಾರಿತೋಷಕ ಬಹುಮಾನ ನೀಡಿಕೆ ಸೌಲಭ್ಯ :

ಸದಸ್ಯರ ಮಕ್ಕಳಲ್ಲಿ ಎಸ್.ಎಸ್.ಎಲ್.ಸಿ., ಪಿ.ಯು.ಸಿ., ಪದವಿ ಹಾಗೂ ಸ್ನಾತಕೋತ್ತರ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಕ್ರೀಡಾ ಕ್ಷೇತ್ರದಲ್ಲಿ ರಾಜ್ಯ ಅಥವಾ ರಾಷ್ಟ್ರ ಮಟ್ಟದಲ್ಲಿ ಬಹುಮಾನ ಪಡೆದ ಅಥವಾ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರತಿನಿಧಿಸಿದ ಸದಸ್ಯರ ಮಕ್ಕಳಿಗೆ ಹಾಗೂ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಜಿ.ಡಿ.ಸಿ. ತರಬೇತಿ ಪಡೆದ ಪ್ರತಿ ತಂಡದಲ್ಲಿ ಅತಿ ಹೆಚ್ಚು ಅಂಕ ಪಡೆದವರಿಗೆ ಪ್ರತಿ ವರ್ಷ ಪ್ರೋತ್ಸಾಹ ಧನವನ್ನು ನೀಡಲಾಗುತ್ತಿದೆ.

### ತಂತ್ರಜ್ಞಾನ ಸೌಲಭ್ಯಗಳು :

* ಸಂಘದ ಎಲ್ಲಾ ವ್ಯವಹಾರವನ್ನು ಸಂಪೂರ್ಣವಾಗಿ ಗಣಕೀಕರಣಗೊಳಿಸಲಾಗಿದೆ.
* ಸಂಘವು ತನ್ನದೇ ಆದ "MAMCOS" ಹೆಸರಿನ ಮೊಬೈಲ್ ಆ್ಯಪ್‌ನ್ನು ಮತ್ತು "MAMCOS.INFO" **'ವೆಬ್‌ಸೈಟ್'**ನ್ನು ಹೊಂದಿದ್ದು, ಸದಸ್ಯರು ಈ ಆ್ಯಪ್ ಮೂಲಕ ಸಂಘದೊಂದಿಗಿನ ತಮ್ಮ ವ್ಯವಹಾರದ ಮಾಹಿತಿಯನ್ನು ತಿಳಿಯಬಹುದು.

### ಇತರ ಸೌಲಭ್ಯಗಳು :

* ಸಂಘದ ಸದಸ್ಯರ ಬಹುದಿನಗಳ ಬೇಡಿಕೆ ಮೇರೆಗೆ ಎಲ್ಲಾ ಬೆಳೆಗಳಿಗೆ ಶಕ್ತಿ ಮತ್ತು ಚೈತನ್ಯವನ್ನು ನೀಡುವ ಸಾವಯವ ಗೊಬ್ಬರವನ್ನು **'ಮಾಮ್‌ಕೋಸ್ ಸಸ್ಯ ಚೈತನ್ಯ'** ಹೆಸರಿನಲ್ಲಿ ಮಾರಾಟ ಮಾಡಲಾಗುತ್ತಿದೆ ಹಾಗೂ Coir pith Based ಇರುವ ಸಾವಯವ ಗೊಬ್ಬರವನ್ನು **'ಮಾಮ್‌ಕೋಸ್ ವಸುಧಾ ಸಿರಿ'** ಹೆಸರಿನಲ್ಲಿ ಮಾರಾಟ ಮಾಡಲಾಗುತ್ತಿದೆ.

* **‘ಮಾಮ್‌ಕೋಸ್ ಬ್ರ್ಯಾಂಡ್’**ನಲ್ಲಿ ಮೈಲುತುತ್ತವನ್ನು ಮಾರಾಟ ಮಾಡಲಾಗುತ್ತಿದೆ. ಅಲ್ಲದೆ, ಸಂಸ್ಥೆಯಿಂದ ರಾಳ, ಸುಣ್ಣ, ಹೈಡ್ರೇಟೆಡ್ ಹಾಗೂ ಡೋಲೋಮೈಟ್ ಸುಣ್ಣ ಮತ್ತು ಅಗ್ರಿ ಲೈಮ್, ಪವರ್ ಸ್ಪ್ರೇಯರ್ ಯಂತ್ರ ಹಾಗೂ ಕಾರ್ಬನ್ ಫೈಬರ್ ದೋಟಿ ಅನ್ನು ಮಾರಾಟ ಮಾಡಲಾಗುತ್ತಿದೆ.

### ಮರಣೋತ್ತರ ಸೌಲಭ್ಯಗಳು :

* ಸದಸ್ಯರು ಮೃತರಾದಲ್ಲಿ ಅವರ ಅಂತ್ಯ ಸಂಸ್ಕಾರಕ್ಕಾಗಿ ಅವರ ನಾಮಿನಿ/ ವಾರಸುದಾರರಿಗೆ ನಿಯಮಕ್ಕೊಳಪಟ್ಟು ಸಂಘದಿಂದ ರೂ.5,000.00 ಆರ್ಥಿಕ ನೆರವನ್ನು ನೀಡಲಾಗುತ್ತದೆ.
* 60 ವರ್ಷದೊಳಗಿನ ಸಂಘದ ಸದಸ್ಯರು ರೂ.3,000, ರೂ.5,000 ಹಾಗೂ ರೂ.10,000 ಸ್ಲ್ಯಾಬ್‌ಗಳಲ್ಲಿ ಆಯ್ಕೆ ಮಾಡಿ ನೋಂದಾಯಿಸಿದಲ್ಲಿ, ಅವರ ನಂತರ ನಾಮಿನಿ/ ವಾರಸುದಾರರಿಗೆ ಕ್ರಮವಾಗಿ ರೂ.15,000, ರೂ.25,000 ಹಾಗೂ ರೂ.50,000ವನ್ನು **“ಮರಣೋತ್ತರ ನಿಧಿ ಯೋಜನೆ–II”**ರಲ್ಲಿ ಹಲವು ನಿಬಂಧನೆಗೆ ಒಳಪಟ್ಟು ನೀಡಲಾಗುತ್ತಿದೆ.

### ಕಳೆದ ಮೂರು ವರ್ಷಗಳ ಅಭಿವೃದ್ಧಿ ವಿವರ

| ಕ್ರ ಸಂ. | ವಿವರ | 2020–21 | 2021–22 | 2022–23 |
|---|---|---|---|---|
| 1 | ಸದಸ್ಯತ್ವ (‘ಎ’ಮತ್ತು‘ಸಿ’ತರಗತಿ) | 27153 | 28394 | 29737 |
| 2 | ಪಾವತಿಯಾದ ಷೇರು ಬಂಡವಾಳ | 7,78,15,990 | 7,93,39,210 | 8,11,43,030 |
| 3 | ನಿಧಿಗಳು: | | | |
| | ಆಪದ್ಧನ (ರಿಜರ್ವ್) ನಿಧಿ | 12,14,82,234 | 15,32,09,862 | 20,92,22,884 |
| | ಇತರೆ ನಿಧಿಗಳು | 44,88,43,761 | 48,83,62,591 | 57,60,03,687 |
| 4 | ಠೇವಣಿಗಳು | 172,96,83,639 | 202,59,83,771 | 203,73,89,227 |
| 5 | ಸ್ವಂತ ಬಂಡವಾಳ | 64,81,41,985 | 72,09,11,663 | 86,63,69,601 |
| 6 | ದುಡಿಯುವ ಬಂಡವಾಳ | 317,15,06,143 | 371,89,74,334 | 388,02,56,600 |
| 7 | ಅಡಿಕೆ ಸಂಗ್ರಹಣೆ (ಮೂಟೆ) | 2,42,333 | 2,54,187 | 2,70,091 |
| 8 | ಅಡಿಕೆ ಮಾರಾಟ (ಮೂಟೆ) | 2,26,966 | 2,16,554 | 2,25,383 |
| 9 | ಅಡಿಕೆ ಖರೀದಿ | 197,54,30,633 | 298,51,08,334 | 333,38,69,440 |
| 10 | ಅಡಿಕೆ ಮಾರಿದ ಬೆಲೆ (ಕಮಿಷನ್ ಮಾರಾಟ) | 408,45,69,380 | 434,21,59,343 | 471,05,45,886 |
| 11 | ಬಂದ ಕಮೀಷನ್ | 6,85,40,469 | 7,62,92,955 | 7,79,42,103 |
| 12 | ಅಡಿಕೆ ಮಾರಾಟ | 183,20,82,011 | 230,78,44,783 | 397,00,06,727 |
| 13 | ಸದಸ್ಯರಿಗೆ ವಿತರಿಸಿದ ಅಡಿಕೆ ಆಧಾರ ಸಾಲ | 112,84,83,204 | 149,99,39,700 | 212,94,90,131 |
| 14 | ಕಟಾವು ಸಾಲ | 28,66,04,777 | 25,75,46,211 | 25,80,94,822 |
| 15 | ಕೊಳೆ ರೋಗ ಔಷಧದ ಸಾಲ | 1,02,71,384 | 97,62,603 | 89,39,925 |
| 16 | ವ್ಯಾಪಾರ ಲಾಭ | 11,22,30,205 | 18,23,26,067 | 22.51.41.312 |
| 17 | ನಿವ್ವಳ ಲಾಭ | 3,32,16,873 | 3,91,96,162 | 4,41,57,276 |
| 18 | ಆಡಿಟ್ ವರ್ಗೀಕರಣ | ‘ಎ’ | ‘ಎ’ | ‘ಎ’ |

### ಮಾಮ್‌ಕೋಸ್ ವತಿಯಿಂದ ಅಡಿಕೆ ಬೆಳೆಗಾರರ ಹಿತರಕ್ಷಣೆಗೆ ಕೈಗೊಂಡ ಕ್ರಮಗಳು:

* ಅಡಿಕೆ ಬೆಳೆಗಾರರ ಹಿತದೃಷ್ಟಿಯಿಂದ 2017 ರಿಂದ ಮಾಮ್‌ಕೋಸ್ ಸಂಸ್ಥೆಯು ನೇರ ಅಡಿಕೆ ಖರೀದಿಯನ್ನು ಆರಂಭಿಸಿದ್ದು, ಇದರಿಂದ ಅಡಿಕೆ ಧಾರಣೆಯಲ್ಲಿ ಸ್ಥಿರತೆಯನ್ನು ಕಾಪಾಡಿದೆ.
* ಮಾಮ್‌ಕೋಸ್ ಸಂಸ್ಥೆಯು ಅಡಿಕೆ ಬೆಳೆಗಾರರ ಹಿತರಕ್ಷಣೆಗೆ ಸದಾ ಕಂಕಣಬದ್ಧವಾಗಿದ್ದು ಇತರೆ ಸಂಸ್ಥೆಗಳ ಸಹಭಾಗಿತ್ವದಲ್ಲಿ ಸಂಘದ ಕಾರ್ಯವ್ಯಾಪ್ತಿಯಲ್ಲಿ ತಾಲ್ಲೂಕು ಮಟ್ಟದಲ್ಲಿ ಅಡಿಕೆ ಎಲೆಚುಕ್ಕೆ ರೋಗದ ಮಾಹಿತಿ ಕಾರ್ಯಾಗಾರವನ್ನು ನಡೆಸಲಾಗಿರುತ್ತದೆ.
* ಅಡಿಕೆ ಬೆಳೆಗೆ ಮಾರಕವಾಗಿರುವ ಎಲೆಚುಕ್ಕೆ ರೋಗದ ಸಂಶೋಧನೆ ಬಗೆಗೆ, ಅಡಿಕೆಯ ಆಮದು ದರ ಹೆಚ್ಚಳ ಮಾಡುವ ಮತ್ತು ಜಿ.ಎಸ್.ಟಿ. ದರವನ್ನು ಕಡಿಮೆ ಮಾಡುವ ಕುರಿತು ಹಾಗೂ ಅಡಿಕೆ ಕೈ ವ್ಯಾಪಾರವನ್ನು ತಡೆಗಟ್ಟಿ ತೆರಿಗೆ ವಂಚನೆಯನ್ನು ನಿಲ್ಲಿಸುವ ಕುರಿತು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದ್ದು, ಇದರ ಪರಿಣಾಮವಾಗಿ ದಿನಾಂಕ:14–02–2023ರಿಂದ ಅನ್ವಯವಾಗುವಂತೆ ಆಮದು ದರವನ್ನು ಕೆ.ಜಿ. ಒಂದಕ್ಕೆ ರೂ.251 ರಿಂದ ರೂ.351ಕ್ಕೆ ಹೆಚ್ಚಿಸಿದೆ.
* ಅಡಿಕೆ ಆರೋಗ್ಯಕ್ಕೆ ಹಾನಿಕಾರಕವಲ್ಲ ಎಂದು ಸಾಬೀತುಪಡಿಸಲು ಸಂಶೋಧನೆ ಅಗತ್ಯವಿರುವುದರಿಂದ ಕರ್ನಾಟಕ ರಾಜ್ಯ ಅಡಿಕೆ ಸಹಕಾರ ಸಂಘಗಳ ಸಹಕಾರ ಮಹಾಮಂಡಳ, ಶಿವಮೊಗ್ಗ ಇವರ ಸಹಭಾಗಿತ್ವದೊಂದಿಗೆ M.S. Ramaiah Institute of Applied Sciences, Bangalore ಇವರಿಗೆ ವಹಿಸಿಕೊಡಲಾಗಿದೆ.

### ಸಂಘವು ಪಡೆದಿರುವ ಪ್ರಶಸ್ತಿಗಳು :

* **“ಸಾರ್ವಜನಿಕ ಸೇವಾ ಪ್ರಶಸ್ತಿ”** – ಕರ್ನಾಟಕ ರಾಜ್ಯ ಸರ್ಕಾರದಿಂದ ನೀಡಲ್ಪಟ್ಟಿರುತ್ತದೆ.
* **“DILIGENT TAX PAYER”** ಅವಾರ್ಡ್ 1997–98ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಸರ್ಕಾರದಿಂದ ನೀಡಲ್ಪಟ್ಟಿರುತ್ತದೆ.
* **“ಸರ್ಟಿಫಿಕೇಟ್ ಆಫ್ ಮೆರಿಟ್ ಅವಾರ್ಡ್”** – ನ್ಯಾಷನಲ್ ಪ್ರೊಡಕ್ಟಿವಿಟಿ ಕೌನ್ಸಿಲ್, ಕೃಷಿ ಸಚಿವಾಲಯ, ಭಾರತ ಸರ್ಕಾರ ಇವರಿಂದ 2005–06ನೇ ಸಾಲಿಗೆ ಸಹಕಾರಿ ಕ್ಷೇತ್ರದಲ್ಲಿ ತೋಟಗಾರಿಕೆ ವಿಭಾಗದಲ್ಲಿ ಉತ್ಪಾದಕತೆಯಲ್ಲಿನ ಹೆಚ್ಚಳಕ್ಕೆ ನೀಡಿದ ಕೊಡುಗೆಗೆ ನೀಡಲ್ಪಟ್ಟಿರುತ್ತದೆ.
* **“ಉತ್ತಮ ಸಹಕಾರ ಸಂಸ್ಥೆ ಪ್ರಶಸ್ತಿ”** – 2007–08ನೇ ಸಾಲಿನಲ್ಲಿ ಸಹಕಾರ ಚಳುವಳಿಯ ಶತಮಾನೋತ್ಸವ ಆಚರಣೆ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸರ್ಕಾರದಿಂದ ನೀಡಲ್ಪಟ್ಟಿರುತ್ತದೆ.
* 2021–22 ಸಾಲಿನಲ್ಲಿ Appreciation Certificate For Prompt Filing Of Returns & Payments Of Goods & Service Tax ನೀಡಲ್ಪಟ್ಟಿರುತ್ತದೆ.

* ಕೈ ವ್ಯಾಪಾರವನ್ನು ಉತ್ತೇಜಿಸದಿರಿ
* ಸಂಘಕ್ಕೆ ಹಾಕಿದ ಅಡಿಕೆಯನ್ನು ಸಂಘದಲ್ಲಿಯೇ ಮಾರಾಟ ಮಾಡಿ
* ನಿಖರ ತೂಕ – ಸ್ಪರ್ಧಾತ್ಮಕ ಬೆಲೆಗೆ ಸಂಘದಲ್ಲಿಯೇ ಅಡಿಕೆ ಹಾಕಿ ವ್ಯವಹರಿಸಿರಿ.

**ಸಹಕಾರ ಸಂಘಗಳ ಮೂಲಕ ವ್ಯವಹಾರ–ಬೆಳೆಗಾರ ರೈತರ ನೆಮ್ಮದಿಗೆ ಸಹಕಾರ**

ಸ್ಥಾಪನೆ : 08/11/1939
ನೊಂದಣಿ ಸಂಖ್ಯೆ : ಆರ್.ಸಿ.ಎಸ್. 1540

ಇ–ಮೇಲ್ : ho@mamcos.info
ವೆಬ್‌ಸೈಟ್ : www.mamcos.info

# ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ ನಿಯಮಿತ

## ಶಿವಮೊಗ್ಗ

ಎ.ಪಿ.ಎಂ.ಸಿ. ಆವರಣ, ಸಾಗರ ರಸ್ತೆ, ಶಿವಮೊಗ್ಗ – 577204
ದೂರವಾಣಿ : 08182–250513, 250514



